# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1094
ಸದಸ್ಯರ ಹೆಸರು : ಶ್ರೀ ಆರ್.ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 20.12.2018
ಉತ್ತರಿಸುವ ಸಚಿವರು : ಮುಖ್ಯಮಂತ್ರಿಯವರು

**********

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಪ್ರತಿನಿತ್ಯ ವಿವಿಧ ಮೂಲಗಳಿಂದ ಎಷ್ಟು ಪ್ರಮಾಣದ ಇಂಧನ ಉತ್ಪಾದನೆಯಾಗುತ್ತಿದೆ ಹಾಗೂ ಬೇಡಿಕೆ ಎಷ್ಟಿರುತ್ತದೆ; (ವಿವರ ನೀಡುವುದು) | ನವೆಂಬರ್-2018ರ ಮಾಹೆಯಲ್ಲಿ ವಿವಿಧ ವಿದ್ಯುತ್ ಉತ್ಪಾದನಾ ಮೂಲಗಳಿಂದ ಲಭ್ಯವಾಗಿರುವ ದೈನಂದಿನ ಸರಾಸರಿ ವಿದ್ಯುತ್ ಪ್ರಮಾಣದ ವಿವರಗಳು ಕೆಳಕಂಡಂತ್ತಿದೆ. (ಕೆಳಗಿನ ಕೋಷ್ಟಕ 1) ಪ್ರಸ್ತುತ, ರಾಜ್ಯದಲ್ಲಿ ಬೇಡಿಕೆ ಪ್ರಮಾಣದಷ್ಟು ವಿದ್ಯುತ್ತನ್ನು ಪೂರೈಸಲಾಗುತ್ತಿದೆ. |
| ಆ) | ಇಂಧನ ಉತ್ಪಾದಿಸಲು ಕರ್ನಾಟಕ ರಾಜ್ಯಕ್ಕೆ ಸಾಕಷ್ಟು ಕಲ್ಲಿದ್ದಲು ಲಭ್ಯವಿದೆಯೇ; ಲಭ್ಯವಿಲ್ಲದಿದ್ದಲ್ಲಿ ಎಷ್ಟು ಪ್ರಮಾಣದ ಕಲ್ಲಿದ್ದಲು ರಾಜ್ಯಕ್ಕೆ ಬೇಕಾಗಿರುತ್ತದೆ; ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬೇಕಾಗುವಷ್ಟು ಕಲ್ಲಿದ್ದಲನ್ನು ನೀಡಲಾಗುತ್ತಿದೆಯೇ; ಇಲ್ಲದಿದ್ದಲ್ಲಿ, ಕಲ್ಲಿದ್ದಲಿಗೋಸ್ಕರ ಸರ್ಕಾರ ಯಾವ ವ್ಯವಸ್ಥೆಯನ್ನು ಮಾಡಿಕೊಂಡಿದೆ? | ಪ್ರಸ್ತುತ, ವಿದ್ಯುತ್ ಉತ್ಪಾದನೆಗೆ ಕಲ್ಲಿದ್ದಲಿನ ದಾಸ್ತಾನನ್ನು ಖಾತ್ರಿಗೊಳಿಸಲು ಸಾಕಷ್ಟು ಪ್ರಮಾಣದ ಕಲ್ಲಿದ್ದಲಿನ ಪೂರೈಕೆ ಇರುವುದಿಲ್ಲ. ಇದಕ್ಕೆ ಪ್ರಮುಖವಾದ ಕಾರಣಗಳು ಕೆಳಕಂಡಂತಿವೆ.<br>(i) ಡಬ್ಲ್ಯೂ.ಸಿ.ಎಲ್. ನಿಂದ ಕಲ್ಲಿದ್ದಲಿನ ಕಡಿಮೆ ಪೂರೈಕೆ<br>(ii) ಬಳ್ಳಾರಿ ವಿದ್ಯುತ್ ಕೇಂದ್ರದ ಘಟಕ – 3 & ಯರಮರಸ್ ವಿದ್ಯುತ್ ಕೇಂದ್ರದ ಘಟಕ – 1 & 2 ಗಳಿಗೆ ಅಕ್ಟೋಬರ್ 2018 ರವರೆಗೆ ಕಲ್ಲಿದ್ದಲಿನ ಲಿಂಕೇಜ್ ಇಲ್ಲದಿರುವುದು: ಕಲ್ಲಿದ್ದಲು ಪೂರೈಕೆ ಒಪ್ಪಂದವನ್ನು ಎಸ್.ಸಿ.ಸಿ.ಎಲ್ ರವರೊಂದಿಗೆ ದಿನಾಂಕ 10.10.2018 ರಂದು ಮಾಡಿಕೊಳ್ಳಲಾಗಿದೆ.<br>(iii) ಮೈನ್ ಡೆವಲಪರ್ & ಆಪರೇಟರ್ (MDO) ನೇಮಕಕ್ಕೆ ಸಂಬಂಧಿಸಿದಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುವುದರಿಂದ ಬಳ್ಳಾರಿ ವಿದ್ಯುತ್ ಕೇಂದ್ರದ ಘಟಕ 1 & 2 ಗಳಿಗೆ ಹಂಚಿಕೆ ಮಾಡಲಾಗಿರುವ ಬಾರಂಜ್ I-IV, ಮನೋರದೀಪ್ & ಕಿಲೋನಿ ಕಲ್ಲಿದ್ದಲು ಗಣಿ / ಬ್ಲಾಕ್ ಗಳಿಂದ ಕಲ್ಲಿದ್ದಲಿನ ಪೂರೈಕೆ / ಉತ್ಪಾದನೆ ಪ್ರಾರಂಭಗೊಳ್ಳದಿರುವುದು<br>ರಾಯಚೂರು, ಬಳ್ಳಾರಿ & ಯರಮರಸ್ ವಿದ್ಯುತ್ ಕೇಂದ್ರಗಳಿಗೆ 2018-19 ನೇ ಸಾಲಿನಲ್ಲಿ ಅಗತ್ಯವಿರುವ ಕಲ್ಲಿದ್ದಲು ಪ್ರಮಾಣದ ವಿವರಗಳು ಕೆಳಕಂಡಂತಿದೆ: (ಕೆಳಗಿನ ಕೋಷ್ಟಕ 2)<br>ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬೇಕಾಗುವಷ್ಟು ಕಲ್ಲಿದ್ದಲು ಪೂರೈಕೆಯಾಗಿರುವುದಿಲ್ಲ. |

ಕೋಷ್ಟಕ 1:

| ಮೂಲ | ದೈನಂದಿನ ಸರಾಸರಿ ಲಭ್ಯತೆ (ಮಿಲಿಯನ್ ಯೂನಿಟ್‌ಗಳಲ್ಲಿ) |
|---|---|
| ಜಲ | 33 |
| ಶಾಖೋತ್ಪನ್ನ | 36 |
| ಕೇಂದ್ರೀಯ ಘಟಕಗಳಿಂದ ರಾಜ್ಯದ ಪಾಲು | 64 |
| ನವೀಕೃತ ಇಂಧನ ಮೂಲಗಳು ಮತ್ತು ಕ್ಯಾಪ್ಟೀವ್ | 51 |
| ಬೃಹತ್ ಸ್ವತಂತ್ರ ಉತ್ಪಾದಕರು | 18 |
| ಖರೀದಿ (ಡಿವಿಸಿ) | 6 |
| ಒಟ್ಟು | 208 |

ಕೋಷ್ಟಕ 2:

| ವಿದ್ಯುತ್ ಉತ್ಪಾದನಾ ಕೇಂದ್ರ | ವಿದ್ಯುತ್ ಉತ್ಪಾದನೆ ದಶಲಕ್ಷ ಯೂನಿಟ್‌ಗಳಲ್ಲಿ | ಕಲ್ಲಿದ್ದಲಿನ ಅಗತ್ಯತೆ ಲಕ್ಷಟನ್‌ಗಳಲ್ಲಿ |
|---|---|---|
| ರಾಯಚೂರು | 9460.96 | 63.86 |
| ಬಳ್ಳಾರಿ | 5733.27 | 37.26 |
| ಯರಮರಸ್ | 2032.47 | 10.16 |

.....2)

ಕಲ್ಲಿದ್ದಲಿನ ಕೊರತೆಯನ್ನು ನೀಗಿಸಲು ತೆಗೆದುಕೊಳ್ಳಲಾಗಿರುವ ಕ್ರಮಗಳು ಕೆಳಕಂಡಂತಿವೆ:

A) ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು, ಕರ್ನಾಟಕ ವಿದ್ಯುತ್ ನಿಗಮ ರವರು ದಿ. 28.05.2018 ರಂದು ಮಾನ್ಯ ಪ್ರಧಾನ ಮಂತ್ರಿಗಳು, ಭಾರತ ಸರ್ಕಾರ ರವರನ್ನು ಭೇಟಿ ಮಾಡಿ ನಿಗಮದ ವಿದ್ಯುತ್ ಕೇಂದ್ರಗಳಲ್ಲಿನ ಕಲ್ಲಿದ್ದಲಿನ ಅತಿಕಡಿಮೆ ದಾಸ್ತಾನು ಮತ್ತು ಪೂರೈಕೆ ಪರಿಸ್ಥಿತಿಯನ್ನು ವಿವರಿಸಿರುತ್ತಾರೆ ಮತ್ತು ನಿಗಮದ ವಿದ್ಯುತ್ ಕೇಂದ್ರಗಳಿಗೆ ಕಲ್ಲಿದ್ದಲಿನ ಪೂರೈಕೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಶೀಘ್ರ/ತಕ್ಷಣದ ಕ್ರಮಗಳನ್ನು ಕೈಗೊಳ್ಳುವಂತೆ ಕೋರಿರುತ್ತಾರೆ.

B) ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು, ಕರ್ನಾಟಕ ವಿದ್ಯುತ್ ನಿಗಮ ರವರು ಶ್ರೀ.ಪಿಯೂಶ್ ಗೋಯಲ್, ಮಾನ್ಯ ರೈಲ್ವೇ ಮತ್ತು ಕಲ್ಲಿದ್ದಲು ಸಚಿವರು ಭಾರತ ಸರ್ಕಾರರವರನ್ನು ದಿ.12.10.2018 ರ ಪತ್ರದ ಮೂಲಕ ಈ ಕೆಳಗಿನಂತೆ ಕೋರಿರುತ್ತಾರೆ:

**I. ರಾಯಚೂರು ವಿದ್ಯುತ್ ಕೇಂದ್ರ:**

- ಕಲ್ಲಿದ್ದಲು ಪೂರೈಕೆ ಒಪ್ಪಂದದಂತೆ ಪೂರೈಕೆಯ ಪ್ರಮಾಣವನ್ನು ತಕ್ಷಣದಿಂದ ಹೆಚ್ಚಿಸುವಂತೆ ಡಬ್ಲ್ಯೂ.ಸಿ.ಎಲ್. / ಕೋಲ್ ಇಂಡಿಯಾ ಲಿಮಿಟೆಡ್‌ರವರನ್ನು ನಿರ್ದೇಶಿಸುವುದು;
- ಏಪ್ರಿಲ್ 2018 ರಿಂದ ಸೆಪ್ಟೆಂಬರ್ 2018ರ ಅವಧಿಯಲ್ಲಿ ಡಬ್ಲ್ಯೂ.ಸಿ.ಎಲ್. ನಿಂದ ಕಲ್ಲಿದ್ದಲು ಪೂರೈಕೆಯಲ್ಲಿ ಉಂಟಾಗಿರುವ 6.00 ಲಕ್ಷಟನ್ ಕೊರತೆ ಪ್ರಮಾಣವನ್ನು ಎಂ.ಸಿ.ಎಲ್. / ಎಸ್.ಇ..ಸಿ.ಎಲ್. ಗೆ ವರ್ಗಾಯಿಸುವಂತೆ ಕಲ್ಲಿದ್ದಲು ಮಂತ್ರಾಲಯ / ಕೋಲ್ ಇಂಡಿಯಾ ಲಿಮಿಟೆಡ್‌ರವರನ್ನು ನಿರ್ದೇಶಿಸಿವುದು;
- ಎಂ.ಸಿ.ಎಲ್.ನಿಂದ ಹಂಚಿಕೆಯಾದ ಸಂಪೂರ್ಣ ಕಲ್ಲಿದ್ದಲು ಪ್ರಮಾಣವನ್ನು ಸಾಗಣೆ ಮಾಡಲು ಸಾಕಷ್ಟು ರೇಕ್ ಗಳನ್ನು ನೀಡುವಂತೆ ಈಸ್ಟ್ ಕೋಸ್ಟ್ ರೈಲ್ವೇ ಇವರಿಗೆ ನಿರ್ದೇಶನ ನೀಡುವುದು;
- ಕರ್ನಾಟಕ ರಾಜ್ಯದ ಬೇಸಿಗೆಯ ವಿದ್ಯುಚ್ಛಕ್ತಿಯ ಬೇಡಿಕೆಯನ್ನು ಪೂರೈಸಲು ಪ್ರತಿ ತಿಂಗಳು 2.00 ಲಕ್ಷಟನ್ ಹೆಚ್ಚುವರಿ ಕಲ್ಲಿದ್ದಲನ್ನು ಮೇ 2019ರ ವರೆಗೆ ಹಂಚಿಕೆ ಮಾಡಲು ಎಂ.ಸಿ.ಎಲ್ ರವರಿಗೆ ನಿರ್ದೇಶಿಸುವುದು.

**II. ಬಳ್ಳಾರಿ ವಿದ್ಯುತ್ ಕೇಂದ್ರ:**

- ನಿಗದಿತ ಕ್ಯಾಪ್ಟೀವ್ ಕಲ್ಲಿದ್ದಲು ಬ್ಲಾಕ್‌ಗಳಿಂದ ಕಲ್ಲಿದ್ದಲು ಉತ್ಪಾದನೆಯ ಪುನಃರಾರಂಭದವರೆಗೆ, ಬಳ್ಳಾರಿ ವಿದ್ಯುತ್ ಕೇಂದ್ರದ 1 & 2 ನೇ ಘಟಕಗಳಿಗೆ ಪ್ರತಿ ತಿಂಗಳು 2.00 ಲಕ್ಷಟನ್ ಕಲ್ಲಿದ್ದಲನ್ನು ಪೂರೈಕೆ ಮಾಡಲು ಕೋಲ್ ಇಂಡಿಯಾ ಲಿಮಿಟೆಡ್ /ಎಸ್.ಸಿ.ಸಿ.ಎಲ್‌ರವರಿಗೆ ನಿರ್ದೇಶಿಸುವುದು.

C) ಮುಂದುವರೆದು, ಆರ್.ಟಿ.ಪಿ.ಎಸ್ ನ ಕಲ್ಲಿದ್ದಲು ಸಂಗ್ರಹದ ಪ್ರಮಾಣ ಗಂಭೀರ ಸ್ಥಿತಿ ಮುಂದುವರೆದಿದ್ದರಿಂದ, ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿರವರು, ಶ್ರೀ.ಇಂದರ್‌ಜಿತ್ ಸಿಂಗ್, ಕಾರ್ಯದರ್ಶಿ, ಭಾರತ ಸರ್ಕಾರದ ಕಲ್ಲಿದ್ದಲು ಮಂತ್ರಾಲಯ, ಇವರಿಗೆ ದಿ. 16.10.2018 ರ ಅರೆ ಸರ್ಕಾರಿ ಪತ್ರದ ಮೂಲಕ ಕೆಳಗಿನಂತೆ ಕೋರಿರುತ್ತಾರೆ

- ಕಲ್ಲಿದ್ದಲು ಪೂರೈಕೆ ಒಪ್ಪಂದದಂತೆ ಪೂರೈಕೆಯ ಪ್ರಮಾಣವನ್ನು ತಕ್ಷಣದಿಂದ ಹೆಚ್ಚಿಸುವಂತೆ ಡಬ್ಲ್ಯೂ.ಸಿ.ಎಲ್. ರವರಿಗೆ ನಿರ್ದೇಶಿಸುವುದು; ಮತ್ತು
- ಎಪ್ರಿಲ್ 2018 ರಿಂದ ಸೆಪ್ಟೆಂಬರ್ 2018ರ ಅವಧಿಯಲ್ಲಿ ಡಬ್ಲ್ಯೂ.ಸಿ.ಎಲ್. ನಿಂದ ಕಲ್ಲಿದ್ದಲಿನ ಪೂರೈಕೆಯಲ್ಲಿ ಉಂಟಾಗಿರುವ 6.00 ಲಕ್ಷಟನ್ ಕೊರತೆ ಪ್ರಮಾಣವನ್ನು 2018–19 ರ ಬಾಕಿ ಇರುವ ಅವಧಿಯಲ್ಲಿ ಸರಬರಾಜು ಮಾಡಲು ಎಂ.ಸಿ.ಎಲ್. ಗೆ ವರ್ಗಾಯಿಸುವಂತೆ ಕೋಲ್ ಇಂಡಿಯಾ ಲಿಮಿಟೆಡ್‌ಗೆ ನಿರ್ದೇಶಿಸಿವುದು.

...3)

| | | |
|---|---|---|
| | | D) ಕಲ್ಲಿದ್ದಲಿನ ಪೂರೈಕೆಗೆ ಸಂಬಂಧಿಸಿದ ಕರ್ನಾಟಕ ಸರ್ಕಾರವು ವ್ಯಕ್ತಪಡಿಸಿರುವ ಕಾಳಜಿಗಳ ಕುರಿತು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿರವರು ದಿ.24.10.2018 ರಂದು ಖುದ್ದಾಗಿ ಕಾರ್ಯದರ್ಶಿ, ಕಲ್ಲಿದ್ದಲು ಸಚಿವಾಲಯರವರೊಡನೆ ಸಹ ಚರ್ಚಿಸಿರುತ್ತಾರೆ.<br>E) 5.00 ಲಕ್ಷ ಟನ್‌ಗಳಷ್ಟು ಕಲ್ಲಿದ್ದಲನ್ನು ಆಮದು ಮಾಡಿಕೊಳ್ಳಲು ಟೆಂಡರ್ ಕರೆಯಲಾಗಿದೆ ಮತ್ತು ಟೆಂಡರ್ ಅಂತಿಮಗೊಳಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ.<br>F) 2019 ರ ಬೇಸಿಗೆಯ ಕೊನೆಯವರೆಗೂ ರೈಲು-ಸಮುದ್ರ-ರೈಲು ಮಾರ್ಗದಲ್ಲಿ ಪ್ರತಿ ತಿಂಗಳು ಹೆಚ್ಚುವರಿಯಾಗಿ 2.00 ಲಕ್ಷಟನ್ ಕಲ್ಲಿದ್ದಲನ್ನು ಹಂಚಿಕೆ ಮಾಡುವಂತೆ ಎಂ.ಸಿ.ಎಲ್. ರವರನ್ನು ಕೋರಲಾಗಿದೆ. |

**ಸಂಖ್ಯೆ: ಇಎನ್ 244 ಇಬಿಎಸ್ 2018**

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ